# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 04/2021

ಸಿಡಬ್ಲು: 13 / ಪಿಡಬ್ಲು: 8

ದಿನಾಂಕ: 04.10.2023

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಬಸವರಾಜ ಕೋಟಿ |
| ತಂದೆ /ಗಂಡನ ಹೆಸರು | : | ಈಶ್ವರಪ್ಪ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಅತ್ತಿಕಟ್ಟಿ ಗ್ರಾಮ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ನನಗೆ ಪ್ರಾಸಾ-2, 4, 6, 7, ಚಾಸಾ-9 ರಿಂದ 12 ಹಾಗೂ 14 ರಿಂದ 16 ರವರ ಪರಿಚಯ ಇರುತ್ತಾರೆ. ನನಗೆ ಆರೋಪಿಗಳ ಪರಿಚಯ ಇರುತ್ತದೆ.

2. ಆರೋಪಿತರು ಹಾಗೂ ಪ್ರಾಸಾ-2, 4, 6, 7 ಇವರ ಮಧ್ಯ ಜಮೀನಿಗೆ ಸಂಬಂಧಪಟ್ಟಂತೆ ತಂಟೆ, ತಕರಾರು ಇತ್ತು. ಇದೇ ರೀತಿ ತಂಟೆ, ತಕರಾರು ಸುಮಾರು 5 - 6 ವರ್ಷಗಳಿಂದಲೂ ಇರುತ್ತದೆ. ಈಗ ಸುಮಾರು ಒಂದು ವರ್ಷದ ಹಿಂದೆ, ಒಂದು ದಿನ ತಾಡಪತ್ರಿ ಸಲುವಾಗಿ ಅವರ ಮಧ್ಯ ಜಗಳವಾಗಿತ್ತು. ಈ ಬಗ್ಗೆ ಪ್ರಾಸಾ-4 ರವರು ಪೋಲೀಸರಿಗೆ ದೂರನ್ನು ಕೊಟ್ಟಿದ್ದರು. ಈ ಕಾರಣಕ್ಕಾಗಿ ಆರೋಪಿಗಳು ಪ್ರಾಸಾ-4 ರವರ ಮೇಲೆ ಸಿಟ್ಟಾಗಿದ್ದರು.

3. ಪ್ರಾಸಾ-4 ರವರು ದೂರನ್ನು ಕೊಟ್ಟ ಎರಡನೆ ದಿನಕ್ಕೆ ಘಟನೆ ನಡೆದಿರುತ್ತದೆ. ಪ್ರಾಸಾ-4, 6, 2 ರವರು ಪ್ರಾಸಾ-7 ರವರ ಮನೆ ಹತ್ತಿರ ನಿಂತುಕೊಂಡಿದ್ದರು. ನಾನು ಮತ್ತು ಪ್ರಾಸಾ-7 ರವರು ಪ್ರಾಸಾ-7 ರವರ ಮನೆಯಲ್ಲಿ ಇದ್ದೆವು. ಪ್ರಾಸಾ-7 ರವರು ಮಾತನಾಡುತ್ತಾ ತಮ್ಮ ಮನೆಯಲ್ಲಿ ಇದ್ದರು. ಆ ನಂತರ ನಾನು ಮತ್ತು ಪ್ರಾಸಾ-7 ರವರು ಕೂಡಾ ಹೊರಗೆ ಬಂದಿರುತ್ತೇವೆ. ಆ ಸಮಯದಲ್ಲಿ ನಮ್ಮ ಜೊತೆಗೆ ಚಾಸಾ-14, 15 ರವರು ಇದ್ದರು. ಆಗ ಸಮಯ ಮದ್ಯಾಹ್ನ 01.30/02.00 ಗಂಟೆಯಾಗಿತ್ತು.

4. ಆಗ 1 ನೇ ಆರೋಪಿ ಸೇರಿ 10 - 12 ಜನರು ಅಲ್ಲಿಗೆ ಬಂದಿರುತ್ತಾರೆ. ಅವರ ಕೈಗಳಲ್ಲಿ ಬಾಟಲಿ, ಕಲ್ಲು ಹಾಗೂ ಬಡಿಗೆ ಇದ್ದವು. ಆಗ 1 ನೇ ಆರೋಪಿ ಬಾಟಲಿಯಿಂದ ಪ್ರಾಸಾ-2 ರವರಿಗೆ

ಹೊಡೆದಿರುತ್ತಾನೆ. ಇನ್ನೂ ಇಬ್ಬರು ಕೂಡಾ ಬಾಟಲಿ ಮತ್ತು ಕಲ್ಲಿನಿಂದ ಪ್ರಾಸಾ-2 ರವರಿಗೆ ಹೊಡೆದಿರುತ್ತಾರೆ. ಪ್ರಾಸಾ-4 ರವರು ಕೆಳಗೆ ಬಿದ್ದಾಗ, 1 ನೇ ಆರೋಪಿಯು ಬೈಕನ್ನು ಪ್ರಾಸಾ-4 ರವರ ಮೇಲಿಂದ ಹತ್ತಿಸಿಕೊಂಡು ಹೋಗಿರುತ್ತಾನೆ. ಪ್ರಾಸಾ-6 ರವರನ್ನು ನೆಲಕ್ಕೆ ಕೆಡವಿ ಬಾಟಲಿಯಿಂದ ಹಾಗೂ ಬಡಿಗೆಯಿಂದ ಹೊಡೆದಿರುತ್ತಾರೆ. ಅವರು ಪ್ರಾಸಾ-4 ರವರಿಗೆ ದೂರನ್ನು ಯಾಕೆ ಕೊಟ್ಟಿರುತ್ತೀ ಎಂದು ಹೇಳಿರುತ್ತಾರೆ. ಆಗ ನಾನು, ಚಾಸಾ-14, 15 ಸೇರಿ ಜಗಳವನ್ನು ಬಿಡಿಸಿರುತ್ತೇವೆ. 9, 10 ಮತ್ತು 13 ನೇ ಆರೋಪಿಗಳು ಕೂಡಾ ಹೊಡೆದಿರುತ್ತಾರೆ.

5. ಆ ದಿನ ಆರೋಪಿಗಳು ಹೊಡೆಯಲು ಉಪಯೋಗಿಸಿದ ಎರಡು ಕಲ್ಲುಗಳು, ಬಾಟಲಿ, ಬಾಟಲಿಯ ಚೂರು, ಬಡಿಗೆ ಇವುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 3 ಮತ್ತು 5 ಎಂದು ಕ್ರಮವಾಗಿ ಗುರುತಿಸಲಾಗಿರುತ್ತದೆ.

6. ಆ ದಿನ 1 ನೇ ಆರೋಪಿ ಪ್ರಾಸಾ-4 ರವರ ಮೇಲೆ ಹತ್ತಿಸಿಕೊಂಡು ಹೋದ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಿಪಿ-4 ಮತ್ತು 5 ನ್ನು ನೋಡುತ್ತಿದ್ದು ಅವುಗಳಲ್ಲಿ ಬೈಕನ ಭಾವಚಿತ್ರ ಇರುತ್ತದೆ.

7. ನಂತರ ಪ್ರಾಸಾ-2 ಮತ್ತು 4 ರವರನ್ನು ಆ್ಯಂಬುಲೆನ್ಸದಲ್ಲಿ ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿರುತ್ತದೆ. ನಂತರ ಅಲ್ಲಿಂದ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಗೆ ಕರೆದುಕೊಂಡು ಹೋಗಲಾಗಿರುತ್ತದೆ.

8. ಆ ದಿನ ಹೊಡೆ ಬಡೆ ಮಾಡಿದ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ಹಾಗೂ ಗೈರು ಹಾಜರ ಇರುವ 2, 4, 5 ಮತ್ತು 12 ನೇ ಆರೋಪಿಗಳಾಗಿರುತ್ತಾರೆ. (2, 4, 5 ಮತ್ತು 12 ನೇ ಆರೋಪಿಗಳ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಅವರ ಗುರುತಿಸುವಿಕೆಯನ್ನು ವಿವಾದಿಸುವುದಿಲ್ಲ ಎಂದು ಹೇಳಿರುತ್ತಾರೆ.) ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ, ಸರ್ಕಾರಿ ಅಭಿಯೋಜಕರು, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದರಿಂದ, ಅನುಮತಿಸಲಾಯಿತು.)**

**ಪಾಟಿ ಸವಾಲುಃ ಪಿಪಿಯವರಿಂದಃ**

9. ಈ ಘಟನೆಯು ದಿಃ 06.03.2020 ರಂದು ಮದ್ಯಾಹ್ನ 02.00 ಗಂಟೆಗೆ ಪ್ರಾಸಾ-7 ರವರ ಮನೆಯ ಮುಂದೆ ನಡೆದಿರುತ್ತದೆ ಎಂದರೆ ಸರಿ. ಆ ದಿನ ಪ್ರಾಸಾ-7 ರವರ ಮನೆಯ ಮುಂದೆ ಪ್ರಾಸಾ-2,

4, 6 ಮತ್ತು 7 ರವರು ಮಾತನಾಡುತ್ತಾ ನಿಂತುಕೊಂಡಿದ್ದರು ಎಂದರೆ ಸರಿ. ನಾನು, ಚಾಸಾ-14, 15 ಕೂಡಾ ಅವರ ಜೊತೆಗೆ ಮಾತನಾಡುತ್ತಾ ನಿಂತುಕೊಂಡಿದ್ದೆವು ಎಂದರೆ ಸರಿ. ಆಗ 13 ಜನ ಆರೋಪಿಗಳು ಅಲ್ಲಿಗೆ ಬಂದರು ಎಂದರೆ ಸರಿ. ಅವರ ಕೈಯಲ್ಲಿ ಕಲ್ಲು, ಬಡಿಗೆ, ಬಾಟಲಿ ಮತ್ತು ಮಚ್ಚು ಇದ್ದವು ಎಂದರೆ ಸರಿ.

10. ಆರೋಪಿಗಳು ಬಂದವರೇ ನಮ್ಮ ಮೇಲೆ ಕೇಸು ಮಾಡುತ್ತೀರಾ ಭೋಸುಡಿ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 13 ಜನ ಆರೋಪಿಗಳು ಬಂದವರೇ ಪ್ರಾಸಾ-2, 4, 6 ಮತ್ತು 7 ರವರಿಗೆ ತೆಕ್ಕೆ ಬಿದ್ದು ಕೈಗಳಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿ. 1 ನೇ ಆರೋಪಿಯು ಮಚ್ಚಿನಿಂದ ಪ್ರಾಸಾ-2 ರವರ ತಲೆಗೆ ಹೊಡೆದಿರುತ್ತಾನೆ ಎಂದರೆ ಸಾಕ್ಷಿಯು ಪ್ರಾಸಾ-2 ರವರ ತಲೆಗೆ ದೊಡ್ಡ ಗಾಯ ಆಗಿರುವುದನ್ನು ನೋಡಿರುತ್ತೇನೆ. ಆ ಗಾಯವು ಮಚ್ಚಿನಿಂದ ಹೊಡೆದರೆ ಆಗಬಹುದು. ಆದರೆ ಹೊಡೆಯುವುದನ್ನು ನಾನು ಗದ್ದಲದಲ್ಲಿ ನೋಡಿರುವುದಿಲ್ಲ.

11. ಮೂರನೆ ಆರೋಪಿಯು ಸೋಡಾ ಬಾಟಲಿಯಿಂದ ಪ್ರಾಸಾ-6 ರವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ ಎಂದರೆ ಸರಿ. 4 ನೇ ಆರೋಪಿಯು ಬಡಿಗೆಯಿಂದ ಪ್ರಾಸಾ-2, 4, 6 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾನೆ ಎಂದರೆ ಸರಿ. ನಂತರ 3 ನೇ ಆರೋಪಿಯು 4 ನೇ ಆರೋಪಿಯಿಂದ ಬಡಿಗೆಯನ್ನು ತೆಗೆದುಕೊಂಡು ಪ್ರಾಸಾ-2, 4, 6 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದಿರುತ್ತಾನೆ ಎಂದರೆ ಸರಿ. 7 ನೇ ಆರೋಪಿಯು ಕಲ್ಲಿನಿಂದ ಪ್ರಾಸಾ-6 ರವರಿಗೆ ಹೊಡೆದಿರುತ್ತಾನೆ ಎಂದರೆ ಸರಿ. 13 ನೇ ಆರೋಪಿಯು ಕಲ್ಲಿನಿಂದ ಪ್ರಾಸಾ-4 ರವರಿಗೆ ಹೊಡೆದಿರುತ್ತಾಳೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ಹೇಳಿರುತ್ತಾರೆ. ಆಗ ನಾನು, ಚಾಸಾ-9 ರಿಂದ 12, 14 ರಿಂದ 16 ಸೇರಿ ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಆಗ ಆರೋಪಿಗಳು ಈ ದಿನ ನೀವು ಉಳಿದುಕೊಂಡಿದ್ದೀರಿ, ಇನ್ನೊಮ್ಮೆ ಸಿಕ್ಕರೆ ನಿಮ್ಮನ್ನು ಉಳಿಸುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿ ಹೋಗಿರುತ್ತಾರೆ ಎಂದರೆ ಸರಿ.

12. ಒಂದನೆ ಆರೋಪಿಯು ಮಚ್ಚಿನಿಂದ ಪ್ರಾಸಾ-2 ರವರ ತಲೆಗೆ ಹೊಡೆದಿರುತ್ತಾನೆ ಮತ್ತು 13 ನೇ ಆರೋಪಿಯು ಪ್ರಾಸಾ-4 ರವರಿಗೆ ಕಲ್ಲಿನಿಂದ ಹೊಡೆದಿರುತ್ತಾಳೆ ಎಂದು ನಾನು ದಿಃ 07.03.2020 ರಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿದ್ದರೂ ಕೂಡಾ ಈಗ ನೋಡಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **ಸದರಿ ಹೇಳಿಕೆಯನ್ನು ಈಗ ನಿಪಿ-11 ಎಂದು ಮತ್ತು ಸಂಬಂಧಪಟ್ಟ ನಮೂದನ್ನು ನಿಪಿ-11(ಎ), ನಿಪಿ-11(ಬಿ) ಎಂದು ಗುರುತಿಸಲಾಯಿತು.**

13. ನ್ಯಾಯಾಲಯದ ಮುಂದೆ ಇರುವ ಮು.ಮಾ.4 ಮಚ್ಚಿನಿಂದಲೇ 1 ನೇ ಆರೋಪಿಯು

ಪ್ರಾಸಾ-2 ರವರ ತಲೆಗೆ ಹೊಡೆದಿದ್ದನ್ನು ನೋಡಿದ್ದರೂ ಕೂಡಾ ನಾನು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

## ಪಾಟಿ ಸವಾಲುಃ ಶ್ರೀ ಜಿ.ಪಿ. ಕೋಳಿವಾಡ, ಆರೋಪಿತರ ಪರ ವಕೀಲರಿಂದಃ

14. ನನ್ನ ತಮ್ಮನ ಮಗಳನ್ನು ಪ್ರಾಸಾ-2 ರವರಿಗೆ ಮದುವೆ ಮಾಡಿ ಕೊಡಲಾಗಿರುತ್ತದೆ. ನಮ್ಮ ಮೂಲ ಊರು ಯಲಿಶಿರುಂದ ಇರುತ್ತದೆ. ಸಾಕ್ಷಿ ಸ್ವತಃ ಅತ್ತಿಕಟ್ಟಿ ಗ್ರಾಮಕ್ಕೆ ಬಂದು 30 ವರ್ಷಗಳಾಗಿರುತ್ತವೆ ಎಂದು ಹೇಳಿರುತ್ತಾರೆ. ಚಾಸಾ-15 ರವರ ತಂಗಿಯನ್ನು ಪ್ರಾಸಾ-2 ರವರಿಗೆ ಮದುವೆ ಮಾಡಿ ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗಳೆಲ್ಲರೂ ಪ್ರಾಸಾ-2, 4, 6, 7 ರವರಿಗೆ ಅಣ್ಣ-ತಮ್ಮಂದಿರಾಗಬೇಕು ಎಂದರೆ ಸರಿ.

15. ದಿಃ 05.03.2020 ರಂದು ಜಮೀನನ್ನು ಅಳತೆ ಮಾಡಲು ಸರ್ವೆಯರರು ಅರೋಪಿಗಳಿಗೆ ಮತ್ತು ಪ್ರಾಸಾ-2, 4, 6, 7 ರವರಿಗೆ ನೋಟೀಸನ್ನು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಳತೆ ಮಾಡಲು ಬಂದಾಗ ಅವರ ಮಧ್ಯ ಜಗಳವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

16. ನಂತರ ಪ್ರಾಸಾ-2, 4, 6, 7 ರವರು ಒಂದು ದೂರನ್ನು ಹಾಗೂ ಆರೋಪಿಗಳು ಒಂದು ದೂರನ್ನು ಮುಂಡರಗಿ ಪೋಲೀಸ ಠಾಣೆಯಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿ. ಆ ಎರಡೂ ಕೇಸುಗಳು ಇವತ್ತಿಗೂ ಕೂಡಾ ಮುಂಡರಗಿ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

17. ಒಂದನೆ ಆರೋಪಿಯು ಬೆಟಗೇರಿಯಲ್ಲಿ ಇರುತ್ತಾನೆ ಎಂದರೆ ಸಾಕ್ಷಿಯು ಬೆಟಗೇರಿಯಲ್ಲಿಯೂ ಇರುತ್ತಾನೆ ಹಾಗೂ ಅತ್ತಿಕಟ್ಟಿಯಲ್ಲಿಯೂ ಇರುತ್ತಾನೆ ಎಂದು ಹೇಳಿರುತ್ತಾರೆ.

18. ಪ್ರಾಸಾ-7 ರವರ ಮನೆಯ ಅಕ್ಕ ಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಹಳ್ಳಿಗಳಲ್ಲಿ ಸ್ವಲ್ಪ ಜಗಳವಾದರೆ ಬಹಳಷ್ಟು ಜನರು ಸೇರುತ್ತಾರೆ ಎಂದರೆ ಸರಿ. ಜಗಳವಾದಾಗ ನಾನು ಪ್ರಾಸಾ-7 ರವರ ಮನೆಯಲ್ಲಿದ್ದೆನು ಎಂದರೆ ಸರಿಯಲ್ಲ. ಜಗಳ ಆರಂಭವಾದಾಗ ಅಕ್ಕ ಪಕ್ಕದ ಸ್ವಲ್ಪ ಜನರು ಬಂದಿರುತ್ತಾರೆ. ಯಾರ ಕೈಯಲ್ಲಿ ಬಡಿಗೆ ಇದ್ದವು, ಯಾರ ಕೈಯಲ್ಲಿ ಬಾಟಲಿ ಇದ್ದವು, ಯಾರ ಕೈಯಲ್ಲಿ ಕಲ್ಲು ಇದ್ದವು ಎಂದು ನನಗೆ ಹೇಳಲು ಆಗುವುದಿಲ್ಲ. ಪ್ರಾಸಾ-2 ಮತ್ತು 6 ರವರಿಗೆ ರಕ್ತಗಾಯಗಳಾಗಿ ಅವರ ಬಟ್ಟೆಗೆಲ್ಲಾ ರಕ್ತವಾಗಿತ್ತು.

19. ಒಂದನೆ ಆರೋಪಿ ಹಾಯಿಸಿದ ಬೈಕನ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ದಿಃ 06.03.2020 ರಂದು ಯಾವುದೇ ಜಗಳ ಆಗಿರುವುದಿಲ್ಲ ಮತ್ತು ಆರೋಪಿಗಳು ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರಾಸಾ-2 ರವರ ಸಂಬಂಧಿಕನಾಗಿದ್ದರಿಂದ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ದಿಃ 05.03.2020 ರಂದು ಆಗಿರುವ ಜಗಳವನ್ನು ನಾನು ಹಾಗೂ

ಪ್ರಾಸಾ-2, 4, 6, 7 ರವರು ಸೇರಿ  ದಿಃ 06.03.2020 ರಂದು ಆಗಿರುತ್ತದೆ ಎಂದು ಸೃಷ್ಟಿ ಮಾಡಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ಮು.ಮಾ.1, 3 ಮತ್ತು 5 ರಂತಹ ವಸ್ತುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಕ್ಷಿಯು ಆ ದಿನ ಅವುಗಳಿಂದ ಹೊಡೆಯಲಾಗಿರುತ್ತದೆ ಎಂದು ಹೇಳಿರುತ್ತಾರೆ.  1 ನೇ ಆರೋಪಿಯು ಪ್ರಾಸಾ-4 ರವರ ಮೇಲೆ ಬೈಕನ್ನು ಹತ್ತಿಸಿಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ  ಹೇ  ಕೇ  ಸರಿ  ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**